ಎಂದು ಕೊರಗಿದ. ಸ್ವಲ್ಪ ನೆನಪಿಸಿಕೊಂಡವರಂತೆ, 'ಅವುಕ್ಕೆ ಈ ಬೇಲಿಯೆಲ್ಲ ಬರಲ್ಲ ಅಂತ, ಐಡೆಕ್ಸ್ ಬೇಲಿ ಮಾಡಿದ್ರೂ, ಅದ್ರ ಸಂದಲಿ ಹೊಕ್ ಬತ್ತವೆ. ಇನ್ ಎಂತ ಸುಟ್ ಮಾಡದು ಮಾರ್‍ರೈತಿ. ಇನ್ ಅವು ಅಗ್ದಿರೊದು ಸರಿ ಮಾಡುಕೆ ನಾಲ್ಕ್ ಆಳಾದ್ರೂ ಬೇಕು' ಎಂದು ಹತಾಶೆಯಲ್ಲಿ ಹೇಳಿದ್ದ. ಇದು ಅವನ ನಿತ್ಯದ ಗೋಳೆ ಆಗಿದ್ದರಿಂದ ಕಲ್ಲಮ್ಮನಿಗೆ ಅವನನ್ನು ಹೇಗೆ ಸಮಾಧಾನಿಸಬೇಕೆಂದು ತಿಳಿಯದೆ ಬಾಗಿಲನ್ನು ಹಿಡಿದು ತದೇಕಚಿತ್ತದಿಂದ ಮನೆ ಅಂಗಳದ ತೋಟವನ್ನು ನೋಡುತ್ತಿದ್ದಳು. ಬೊಮ್ಮನ ಹತಾಶೆ ಇನ್ನಷ್ಟು ಗಾಢವಾದಂತೆ ಕಾಣಿಸಿತು. ಗಟ್ಟಿಯಾಗಿ ಕುರ್ಚಿಯಲ್ಲಿ ಕುಳಿತ. ತಲೆಯನ್ನು ಎತ್ತಿ ಹಂಚಿನ ಮಾಡಿನ ಕಡೆ ಮುಖವನ್ನು ಮಾಡಿ ಯೋಚಿಸುತ್ತಿದ್ದ. ಒಂದೈದು ನಿಮಿಷ ಯಾರಿಂದಲೂ ಮಾತುಗಳು ಬರದೆ ಜುಗುಲಿ ನೀರವ ಮೌನದತ್ತ ಹೊರಳಿತ್ತು. ಸಟ್ಟನೇ ಬೊಮ್ಮನಿಗೆ ಏನೋ ನೆನಪಾದಂತೆ ಅನ್ನಿಸಿ ಕುರ್ಚಿಯಿಂದ ಮೇಲೆದ್ದ. ಹೆಂಡತಿಯಲ್ಲಿ ಗಡಿಬಿಡಿ ಮಾಡುತ್ತ, ಊಟಕ್ಕೆ ಬೇಗ ಹಾಕು, ಒಂದು ಕಡೆಗೆ ಹೋಗಿ ಬರುವುದಿದೆ ಎಂದು ಅಡುಗೆ ಮನೆಯ ಕಡೆಗೆ ಹೊರಟಾಗ ಕಲ್ಲಮ್ಮನು ಅವನ ಜೊತೆ ಹೆಜ್ಜೆಯನ್ನು ಹಾಕಿದ್ದಳು.

* * *

ಕೂಲಿ ನಾಲಿ ಮಾಡಿಕೊಂಡಿದ್ದ ಬೊಮ್ಮನಾಯ್ಕ ಕೃಷಿಕನಾಗಿದ್ದು ಆಕಸ್ಮಿಕವಾಗಿ. ಹತ್ತಾರು ವರುಷಗಳಿಂದ ಊರಿನ ಹೆಗಡೆಯವರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಬೊಮ್ಮನಿಗೆ, ಅವರ ಮನೆ ಎಂದರೆ ಅದು ಬಿಡಿಸಲಾಗದ ಅವಿನಾಭಾವ ಸಂಬಂಧ ಎನ್ನುವಂತಾಗಿಬಿಟ್ಟಿತ್ತು. ಆದರೆ ಒಂದು ದಿನ ಬೊಮ್ಮ, ಹೆಗಡೆಯವರ ಮನೆಯಲ್ಲಿ ಸಂಜೆ ಕೆಲಸ ಮುಗಿಸಿ, ಕೈಕಾಲುಗಳನ್ನು ತೊಳೆದು, ಚಿಟ್ಟೆಯಲ್ಲಿ ಶಾರದಮ್ಮ ಕೊಟ್ಟ ಎಲೆ ಅಡಿಕೆಯನ್ನು ಜೋಬಿನಲ್ಲಿ ಇಳಿಸಿಕೊಳ್ಳುತ್ತ, ಮನೆಯ ಒಳಗಿನ ಕುರ್ಚಿಯಲ್ಲಿ ಹೆಗಡೆಯವರು ಕುಳಿತಿದ್ದಾರೋ ಇಲ್ಲವೋ ಎಂದು ಬಗ್ಗಿ ನೋಡುತ್ತ, ದೈನ್ಯದಲ್ಲಿ, 'ಹೆಗ್ಡರೇ' ಎಂದು ಕೂಗಿ ಕರೆದಿದ್ದ. 'ಅರೇ, ಬೊಮ್ಮ, ಕೆಲಸ ಮುಗಿಯಿತನಾ' ಎನ್ನುತ್ತಲೇ ಹೆಗಡೆಯವರು ಒಳಗಿನಿಂದ ಎದ್ದು ಬೊಮ್ಮ ಕುಳಿತಿರುವ ಜಾಗಕ್ಕೆ ಬಂದಿದ್ದರು. ಬೊಮ್ಮ ಸೌಜನ್ಯದಿಂದಲೇ ಆ ದಿನದ ಕೆಲಸದ ವರದಿಯನ್ನು ಹೆಗಡೆಯವರಿಗೆ ಒಪ್ಪಿಸಿ ಮಾತು ಮುಗಿಸಿದ್ದ. ಹೆಗಡೆಯವರು ಅದಕ್ಕೆಲ್ಲ ಸ್ಪಂದಿಸುತ್ತ ಇನ್ನು ಆಗಬೇಕಾದ ಕೆಲಸಗಳ ಬಗ್ಗೆ ಮಾತಾಡಿ, ಅವನನ್ನು ಮನೆಗೆ ಕಳುಹಿಸಿಕೊಡುವ ಯತ್ನದಲ್ಲಿದ್ದರು. ಆದರೂ ಬೊಮ್ಮ ತಲೆ ತುರಿಸಿಕೊಳ್ಳುತ್ತ, ಮಳ್ಳನ ಹಾಗೆ ನಾಚುತ್ತ ನಿಂತಿರುವುದನ್ನು ಹೆಗಡೆಯವರು ಗಮನಿಸಿ, 'ಏಯ್ ಬೊಮ್ಮ, ಎಂತ ದುಡ್ ಗಿಡ್ಡ್ ಏನಾದ್ರು ಬೇಕಿತ್ತನಾ?' ಎಂದು ಕೇಳಿದ್ದರು. ಹೆಗಡೆಯವರೇ ದುಡ್ಡಿನ ಬಗ್ಗೆ ಹೇಳಿದ್ದು ಬೊಮ್ಮನಿಗೆ ಮುಂದೆ ಮಾತನ್ನಾಡುವುದಕ್ಕೆ ಒಂದು ತರಹದ ಶಕ್ತಿ ಬಂದಿತ್ತು. ಸಂಶಯದಿಂದಲೇ ಹೇಳಲೋ, ಬೇಡವೋ ಎನ್ನುತ್ತಲೇ ಅದು ಅದು ಎಂದು ಮಾತನ್ನು ಎಳೆಯುತ್ತ, ತುಸು ಧೈರ್ಯವನ್ನು ಮೈಯಲ್ಲಿ ತುಂಬಿಕೊಂಡು, 'ಹೆಗ್ಡರೇ, ಊರ್ನಲ್ಲಿ ಬೇರೆ ಮನೆಯಲ್ಲಿ ಕೆಲ್ಸ ಮಾಡರಿಗೆಲ್ಲ ಈ ವರ್ಷ ಸಂಬ್ಳ ಹೆಚ್ ಆಗೈತಿ. ನನ್ನ ಆಳ್ ಸಂಬ್ಳ ಹೆಚ್ ಮಾಡಿ ಐದಾರು ವರುಷ ಆತೆನಾ. ನನಗೂ ಹೆಚ್ ಮಾಡಿದ್ರೆ ಒಳ್ಳೆದಿತ್ರ. ಈ ಸಂಬ್ಳ ಪೂರೈಸಲ್ಲ' ಎಂದು ವಿನಂತಿಸಿಕೊಂಡಿದ್ದ. ಅವನ ಮಾತನ್ನು ಕೇಳಿದ ಹೆಗಡೆಯರು ತುಸು ಲಘುವಾಗಿ ಮಾತನ್ನು ಆಡಿಬಿಟ್ಟಿದ್ದರು. 'ಅಲಾ, ಬೊಮ್ಮ, ನಿಂಗೆ ಎಪ್ಪತ್ತು ವರುಷ ಆತನಾ? ಈ ವಯಸ್ಸನಲ್ಲಿ ಸಂಬ್ಳ ಏರಿಸು ಅಂತಿಯಪ್ಪ. ನೋಡಿದ್ರೆ ನಿಂಗೆ, ಒಂದು ಹೆಡಿಗೆ ಮಣ್ಣನ್ನೂ ಎತ್ತಿ ಹಾಕುವ ಶಕ್ತಿ ಇಲ್ಲಲ್ಲ ಮಾರಾಯ. ನಿಂಗೆ ಎಂತಕೆ ಸಂಬ್ಳ ಹೆಚ್ ಮಾಡ್ಬೇಕಾ' ಎಂದು ನಗುತ್ತಲೇ ಪ್ರಶ್ನಿಸಿ ಬಿಟ್ಟಿದ್ದರು. ಅವರ ಮಾತನ್ನು ಕೇಳುತ್ತಲೇ ಬೊಮ್ಮ ಒಮ್ಮೆಗೆ ಕಕ್ಕಾಬಿಕ್ಕಿಯಾದ. ಮತ್ತೊಮ್ಮೆ, 'ಇಲ್ಲಾ ಒಡೆಯ, ಬೇರೆ ಕಡೆಗಳಲ್ಲಿ ಸಂಬ್ಳ ಹೆಚ್ ಮಾಡರೆ, ನೀವು ಮಾಡಿದ್ರೆ' ಎಂದು ತಿಣುಕುತ್ತ ಬೇಡಿಕೊಂಡಿದ್ದ.

ಮತ್ತೊಮ್ಮೆ ಬೊಮ್ಮ ವಿನಂತಿಸಿಕೊಂಡಿದ್ದು ಬಹುಶಃ ಹೆಗಡೆಯವರಿಗೆ ಸಹ್ಯವಾಗಿರಲಿಲ್ಲ. ತುಸು ಗಟ್ಟಿಯಾಗಿಯೇ, 'ಅಲ್ಲಾ ಬೊಮ್ಮ, ಒಂದು ಆಳು ಒಂದು ದಿನ ಮಾಡುವ ಕೆಲಸಕ್ಕೆ, ನಿಂಗೆ ಎರಡು ದಿನ ಬೇಕು. ಆದ್ರೂ ಪರವಾಗಿಲ್ಲ ನಮ್ಮವ ಅಂತ ನಾನು ನಿನಗೆ ಕೆಲಸ ಕೊಟ್ಟಿದ್ದೆ. ಪಾಪ ನಿನ್ನ ಮಕ್ಕಳೆಲ್ಲ ನಿನ್ನ ಬಿಟ್ಟು ಎಲ್ಲೋ ಹೋಗಿದ್ದಾರೆ. ಈ ವಯಸ್ಸಿನಲ್ಲಿ ನಿಂಗೆ ಬದುಕುವುದು ಕಷ್ಟ ಎಂದು ಅಯ್ಯೋ ಹೋಗಲಿ ಅಂತ ನಿಂಗೆ ಕೆಲಸಕೊಟ್ಟಿದ್ದು ವಿನಃ ನನಗೇನು ಬೇಕು ಅಂತಲ್ಲ. ನಾನು ನಿನಗೆ ಸಂಬಳ ಕೊಡಕಾಗದು ಇಷ್ಟೇಯ. ನಿಂಗೆ